

# ಅಂಟಿಕ್ವೆರಾದ ನೈಸರ್ಗಿಕ ಶಿಲ್ಪಗಳು

ನಿಸರ್ಗವೇ ಸೃಷ್ಟಿಸಿದ ನಯನ ಮನೋಹರ ಶಿಲ್ಪಕಲೆಯ ಆಕೃತಿಗಳಿಗೆ ಇದು ಹೆಸರುವಾಸಿ. ಇಲ್ಲಿರುವ ಕುಸಿದುಹೋದ ಹಂಪೆಯ ಶಿಥಿಲ ಕಟ್ಟಡಗಳನ್ನು ನೆನಪಿಸುವ ರಚನೆಗಳು, ವಿವಿಧ ಪ್ರಾಣಿಗಳು, ಸ್ಥಂಭಗಳು, ಮದ್ಯ ಕುಡಿಯುವ ಪಾತ್ರೆಗಳು ಮೊದಲಾದ ಬಗೆಬಗೆಯ ಕೃತಿಗಳನ್ನು ರಚಿಸಲು ಯಾವ ಶಿಲ್ಪಿಯೂ  ಚಾಣವನ್ನು ಬಳಸಿ ವರ್ಷಗಟ್ಟಲೆ ದುಡಿದಿಲ್ಲ.

ಇಂತಹ ಅಮೋಘ ಶಿಲಾ ರಚನೆಗಳಿರುವುದು ಸ್ಪೇನ್ ದೇಶದ ಅಂಟಿಕ್ವೆರಾ ನಗರದ ದಕ್ಷಿಣಕ್ಕೆ ಹತ್ತು ಕಿಲೋಮೀಟರ್ ದೂರದಲ್ಲಿರುವ ವಿಲ್ಲಾನ್ಯೂಯೇವಾ ಲಾಲಾ ಕಾನ್ಸೆಸ್ಪಿಯನ್ ಗ್ರಾಮದ ಪರ್ವತಶ್ರೇಣಿಯಲ್ಲಿ. ಲಕ್ಷಾಂತರ ವರ್ಷಗಳ ಹಿಂದೆ ಈ ಪರ್ವತಗಳು ಅಟ್ಲಾಂಟಿಕ್ ಸಾಗರ ಮತ್ತು ಮೆಡಿಟರೇನಿಯನ್ ಸಮುದ್ರಗಳ ಮಧ್ಯೆ ಇದ್ದವು. ಅದೆಷ್ಟೋ ಯುಗಗಳಿಂದ ಇವು ಸಮುದ್ರದ ಒಳಗೆ ಜಲರಾಶಿಯಲ್ಲಿ ಮುಳುಗಿದ್ದವು. ಕಾಲಾಂತರದಲ್ಲಿ ಸಮುದ್ರಗಳು ಪರ್ವತಗಳಿಂದ ದೂರ ಸರಿದವು. 1300 ಮೀಟರ್ ಎತ್ತರದ ಪರ್ವತ ಶ್ರೇಣಿ ಸಮುದ್ರ ಜಲದಿಂದ ಮುಕ್ತವಾಗಿ ಗೋಚರಿಸಿತು,

ಮಿಲಿಯಗಟ್ಟಲೆ ವರ್ಷಗಳ ಕಾಲ ನೀರಿನೊಳಗೆ ಇದ್ದ ಪರ್ವತದ ಕಲ್ಲುಗಳು ಸತತ ಮಳೆ, ಸಮುದ್ರದ ತೆರೆಗಳು ಮತ್ತು ಚಂಡಮಾರುತಗಳಿಗೆ ಸಿಲುಕಿ ಒಳಗಿಂದೊಳಗೆ ಪರಿವರ್ತನೆ ಹೊಂದುತ್ತಲೇ ಬಂದವು. ಕ್ಯಾಲ್ಸಿಯಮ್ ಕಾರ್ಬೋನೇಟ್ ಪ್ರಭಾವದಿಂದ ಬಂಡೆಗಳು ತುಂಬ ಮೃದುವಾದ ಕಾರಣ ಒಂದೆಡೆ. ಇನ್ನೊಂದೆಡೆ ಪ್ರಾಕೃತಿಕ ಆಘಾತಗಳ ಫಲವಾಗಿ ಬಹು ಚಂದದ ಕಲಾಕೃತಿಗಳಾಗಿ ಹೊರ ಹೊಮ್ಮಿದವು. ನಿಸರ್ಗ ಮೂಡಿಸಿದ ವೈವಿಧ್ಯಮಯ ಕೃತಿಗಳಲ್ಲಿ ಸಿಂಹ, ಒಂಟೆ ಮೊದಲಾದ ಪ್ರಾಣಿಗಳ ಆಕಾರಗಳಿವೆ.

■ ಪ. ರಾಮಕೃಷ್ಣ ಶಾಸ್ತ್ರಿ

